

ಪತ್ನಿ ಚಂದ್ರಾ, ಮಗ ಕೊಟ್ರೇಶ ಮತ್ತು ಸೊಸೆ ಶಾಲಿನಿಯೊಂದಿಗೆ ಓ.ಎಲ್. ನಾಗಭೂಷಣ ಸ್ವಾಮಿ

ಚಿತ್ರ: ಅನೂಪ್ ರಾಘ್ ಟಿ.

ಕೋಟೆಯಾಗುತ್ತದೆ. ನಿಕಟವಾಗಿ ಅರ್ಥಮಾಡಿಕೊಂಡ, ಅರ್ಥಮಾಡಿಕೊಳ್ಳುವ ವ್ಯಕ್ತಿಗಳಿಲ್ಲದೆ ಹೋದರೆ ಬದುಕು ಕೂಡ ಒಣಗಿ ಹೋಗುತ್ತದೆ. ನಿಕಟ ಓದು ಅನ್ನುವುದು ಎಲ್ಲ ವಿವರಗಳನ್ನು ಅಥವಾ ಸಾಧ್ಯವಾದಷ್ಟೂ ವಿವರಗಳನ್ನು ಗಮನಿಸುವ ಓದು. ಇಂಥ ಓದು ಬದುಕಿನ ಬಗ್ಗೆಯೂ ಅಗತ್ಯ. ಸಾಹಿತ್ಯ-ಶಿಕ್ಷಣದಲ್ಲೂ, ಬದುಕಿನಲ್ಲೂ ಈ ನಿಕಟ ಓದು ಬೇಕೇ ಬೇಕು. ಯಾವುದೇ ಸೈದ್ಧಾಂತಿಕ ತಿಳಿವಳಿಕೆಗೂ ನಿಕಟ ಓದು ಮುಖ್ಯ.

ನಾವೀಗ 'ಸ್ಪಂದನ' ಮತ್ತು 'ಪ್ರತಿಕ್ರಿಯೆ'ಗಳ ವ್ಯತ್ಯಾಸ ತಿಳಿಯಲಾಗದ ಸ್ಥಿತಿಯಲ್ಲಿದ್ದೇವೆ. ನಿಕಟ ಓದಿಗೂ ಸ್ಪಂದನೆಯ ಸಾಮರ್ಥ್ಯಕ್ಕೂ ಬಿಡಿಸಲಾಗದ ನಂಟು ಇದೆ. ಪ್ರತಿಕ್ರಿಯೆ ಬಹಳ ಸಾರಿ ದುಡುಕಿನದು, ಆಯಾ ಕ್ಷಣದ ಅಗತ್ಯದಿಂದ ಹುಟ್ಟಿದ್ದು ಆಗಿರುತ್ತದೆ. ವಿಮರ್ಶೆ ಪ್ರತಿಕ್ರಿಯೆಯಲ್ಲ, ಪ್ರತಿಸ್ಪಂದನದ ಸೂಕ್ಷ್ಮಗಳನ್ನು ಹಿಡಿದಿಡುವ ದಾರಿ. ಪ್ರತಿಕ್ರಿಯೆ ತಕ್ಷಣಕ್ಕೆ ಹೊಳೆದ ಅರ್ಥ, ತಕ್ಷಣಕ್ಕೆ ಹೊಳೆದ ತೀರ್ಮಾನವಾಗಿರುತ್ತದೆ. ಪ್ರತಿಸ್ಪಂದನ ಬದಲಾಗುವಂಥದ್ದು, ಯಾಕೆಂದರೆ ಅದು ಜೀವಂತವಾದದ್ದು. ಕೃತಿ ಅನ್ನುವುದು ಅಚ್ಚಾದ ಪುಸ್ತಕವಲ್ಲ. ಓದುಗ ಮನಸ್ಸು ಪ್ರತಿ ಓದಿನಲ್ಲೂ ಸೃಷ್ಟಿಮಾಡಿಕೊಳ್ಳುವ ಜೀವಂತ ವಸ್ತು. ಓದಿನ ಉದ್ದೇಶ, ಅಗತ್ಯ ಬದಲಾದಂತೆ ಸ್ಪಂದನದ ಸ್ವರೂಪವೂ ಬೇರೆಯಾಗುತ್ತದೆ. ಮೌಲ್ಯಮಾಪನವೂ ಹಲವಾರು ಷರತ್ತುಗಳಿಗೆ, ಅಗತ್ಯಕ್ಕೆ ತಕ್ಕಂತೆ ರೂಪುಗೊಳ್ಳುವುದೇ ಅಲ್ಲವೇ?

◆ **'ಪ್ರತಿಕ್ರಿಯೆ' ಮತ್ತು 'ಸ್ಪಂದನ'ಗಳ ನಡುವಿನ ಅಂತರವನ್ನರಿಯದ ಈ ಸಮಯದಲ್ಲಿ, 'ಪರಂಪರೆ' ಎನ್ನುವುದನ್ನು, 'ಮೌಲ್ಯಮಾಪನ ವಿಮರ್ಶೆ' ಎನ್ನುವುದನ್ನು ಹೇಗೆ ಕಾಣಬೇಕಿದೆ?**

'ಪರಂಪರೆ' ಅನ್ನುವುದು ಒಂದು ಇರುವುದಿಲ್ಲ, 'ಅನೇಕ ಪರಂಪರೆಗಳು' ಏಕಕಾಲದಲ್ಲಿ ಇರುತ್ತವೆ. ಲೇಖಕರೂ, ಓದುಗರೂ ತಮಗೆ ಬೇಕಾದ ಪರಂಪರೆಯನ್ನು ತಾವೇ ಕಟ್ಟಿಕೊಳ್ಳುತ್ತಾರೆ, ಇರುವ ಪರಂಪರೆಯನ್ನು ಪ್ರಶ್ನಿಸುತ್ತಾರೆ, ಪ್ರತಿಭಟಿಸುತ್ತಾರೆ. ಪರಂಪರೆಯು ಹಾಗೆ ಜಡವಾದದ್ದಲ್ಲ. ನಮ್ಮ ಇಂದಿನ ಕ್ರಿಯೆಗಳ ಸಮರ್ಥನೆಗೆ ನಾವು ರೂಪಿಸಿಕೊಳ್ಳುವ ಸಂಗತಿ. ಮೌಲ್ಯಮಾಪನದಲ್ಲಿ ಎಷ್ಟು ಅಂಶ